1. ತಾಪಮಾನವನ್ನು 4 °C ನಿಂದ 0 °C ಗೆ ಇಳಿಸಿದಾಗ ನೀರಿನ ಪರಿಮಾಣ ಏನಾಗುವುದು ?

(1) ಮೊದಲು ಕಡಿಮೆಯಾಗುವುದು ತದನಂತರ ಹೆಚ್ಚಾಗುವುದು (2) ಸ್ಥಿರವಾಗಿರುತ್ತದೆ
(3) ಕಡಿಮೆಯಾಗುವುದು (4) ಹೆಚ್ಚಾಗುವುದು

2. ಗಾಜಿನ ತಯಾರಿಕೆಯು ಈ ಕೆಳಗಿನ ಹಂತಗಳನ್ನು ಒಳಗೊಂಡಿದೆ.

a. ಕುಲುಮೆಯಲ್ಲಿ ಕರಗಿಸುವುದು b. ಆಕಾರ ನೀಡುವುದು
c. ತಣ್ಣಗಾಗಿಸಿ ಹದಗೊಳಿಸುವುದು (ಅನುತಾಪನ) d. ಕಚ್ಚಾ ವಸ್ತುಗಳನ್ನು ಬ್ಯಾಚ್ ಮಾಡುವುದು

ಸರಿಯಾದ ಅನುಕ್ರಮವು :

(1) c, d, a, b (2) b, c, d, a (3) d, a, b, c (4) a, b, c, d

3. ಸೋಪುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

**ಹೇಳಿಕೆ I :** ಕೊಳಕು ಬಟ್ಟೆಗಳಿಂದ ಎಣ್ಣೆ ಮತ್ತು ಗ್ರೀಸನ್ನು ತೆಗೆದುಹಾಕಲು ಸಾಬೂನು ಸಹಾಯ ಮಾಡುತ್ತದೆ.

**ಹೇಳಿಕೆ II :** ಸೋಪಿನ ಅಣುಗಳು ನೀರಿನೊಂದಿಗೆ ನಿಜವಾದ ದ್ರಾವಣವನ್ನು ರೂಪಿಸುತ್ತವೆ ಮತ್ತು ಕೊಳೆಯನ್ನು ಸಂಪೂರ್ಣವಾಗಿ ಕರಗಿಸುತ್ತವೆ.

ಈ ಕೆಳಗೆ ನೀಡಿರುವ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) ಹೇಳಿಕೆ I ತಪ್ಪಾಗಿದೆ, ಆದರೆ ಹೇಳಿಕೆ II ಸರಿಯಾಗಿದೆ. (2) ಹೇಳಿಕೆ I ಸರಿ, ಆದರೆ ಹೇಳಿಕೆ II ತಪ್ಪಾಗಿದೆ.
(3) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪಾಗಿವೆ. (4) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ.

4. ಕೆಳಗೆ ನೀಡಿರುವ ಪರ್ಯಾಯಗಳಿಂದ ಬಿಟ್ಟು ಹೋದ ಸಂಖ್ಯೆಯನ್ನು ಗುರುತಿಸಿ.




(1) 56 (2) 45 (3) 52 (4) 48

5. ಒಂದು ಪೆಟ್ಟಿಗೆಯಲ್ಲಿ 10 ಕೆಂಪು, 6 ನೀಲಿ ಮತ್ತು 8 ಹಸಿರು ಚೆಂಡುಗಳಿವೆ. ಒಂದು ಚೆಂಡನ್ನು ಯಾದೃಚ್ಛಿಕವಾಗಿ ಎತ್ತಿದಾಗ, ಅದು ನೀಲಿ ಬಣ್ಣವೂ ಅಲ್ಲದ ಹಸಿರು ಬಣ್ಣವೂ ಅಲ್ಲದ ಚೆಂಡಾಗಿರುವ ಸಾಧ್ಯತೆ ಎಷ್ಟು ?

(1) $\frac{5}{12}$ (2) $\frac{6}{12}$ (3) $\frac{4}{12}$ (4) $\frac{3}{12}$

6. ಸರಳೀಕರಿಸಿ : $\frac{(53+46)^2-(53-46)^2}{53\times 46}$

(1) 3 (2) 2 (3) 4 (4) 8

**ಕಚ್ಚಾ ಕಾರ್ಯಕ್ಕಾಗಿ ಸ್ಥಳ**



SHIKARAT.COM
Scanned with OKEN Scanner

7. LASER – ಎಂಬುದು ಇದರ ಸಂಕ್ಷಿಪ್ತ ರೂಪ

(1) ಲೈಟ್ ಅಬ್ಸಾರ್ಪ್‌ಷನ್ ಬೈ ಸ್ಪಾಂಟೇನಿಯಸ್ ಎಮಿಷನ್ ಆಫ್ ರೇಡಿಯೇಷನ್

(2) ಲೈಟ್ ಅಟೆನ್ಯುಯೇಷನ್ ಬೈ ಸ್ಟಿಮ್ಯುಲೇಟೆಡ್ ಎಮಿಷನ್ ಆಫ್ ರೇಡಿಯೇಷನ್

(3) ಲೈಟ್ ಆ್ಯಂಪ್ಲಿಫಿಕೇಶನ್ ಬೈ ಸ್ಟಿಮ್ಯುಲೇಟೆಡ್ ಎಮಿಷನ್ ಆಫ್ ರೇಡಿಯೇಷನ್

(4) ಲೈಟ್ ಆ್ಯಂಪ್ಲಿಫಿಕೇಶನ್ ಬೈ ಸ್ಪಾಂಟೇನಿಯಸ್ ಎಮಿಷನ್ ಆಫ್ ರೇಡಿಯೇಷನ್

8. ಕೋಣೆಯ ಒಳಗೆ ಚಾಲನೆಯಲ್ಲಿರುವ ರೆಫ್ರಿಜರೇಟರ್‌ನ ಬಾಗಿಲು ತೆರೆದು ಇರಿಸಿದಾಗ ಏನಾಗುತ್ತದೆ ? ಸರಿಯಾದ ಹೇಳಿಕೆ ಗುರುತಿಸಿ.

(1) ಕೋಣೆಯ ತಾಪಮಾನದ ಮೇಲೆ ಪರಿಣಾಮ ಬೀರುವುದಿಲ್ಲ.

(2) ಕೋಣೆಯ ತಾಪಮಾನ ರೆಫ್ರಿಜರೇಟರ್ ಒಳಗಿನ ತಾಪಮಾನಕ್ಕೆ ಸರಿಸಮವಾಗಿ ತಣ್ಣಗಾಗುತ್ತದೆ.

(3) ಕೋಣೆಯ ತಾಪಮಾನವು ಕ್ರಮೇಣ ಬೆಚ್ಚಗಾಗುತ್ತ ಹೋಗುತ್ತದೆ.

(4) ಕೋಣೆಯನ್ನು ಸ್ವಲ್ಪ ತಣ್ಣಗಾಗಿಸುತ್ತದೆ.

9. ಸಾಮಾನ್ಯವಾಗಿ ಉಪಗ್ರಹಗಳನ್ನು ಉಡಾಯಿಸುವುದು

(1) ಭೂಮಿಯ ಮೇಲ್ಮೈಯ ಯಾವುದೇ ಭಾಗದಿಂದ
(2) ಧ್ರುವ ಮತ್ತು ಸಮಭಾಜಕ ವೃತ್ತದ ಮಧ್ಯಭಾಗದಿಂದ
(3) ಭೂಮಿಯ ಸಮಭಾಜಕ ವೃತ್ತದಿಂದ
(4) ಭೂಮಿಯ ಧ್ರುವಗಳಿಂದ

10. ಶಬ್ದ ತರಂಗಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

**ಹೇಳಿಕೆ I :** ಮಾನವನ ಕಿವಿಯ ಶಬ್ದ ಸಂವೇದನೆಯ ಆವರ್ತನಗಳ ವ್ಯಾಪ್ತಿಯು 20 Hz ರಿಂದ 20000 Hz.

**ಹೇಳಿಕೆ II :** ವೈದ್ಯಕೀಯ ಸಮಸ್ಯೆಗಳನ್ನು ತಪಾಸಣೆಗೊಳಪಡಿಸುವ ಮತ್ತು ಪತ್ತೆ ಮಾಡಲು ಬಳಸುವ ಅಲ್ಟ್ರಾ ಸೌಂಡ್ ಉಪಕರಣವು 20000 Hz ಗಿಂತ ಕಡಿಮೆ ಆವರ್ತನಗಳಲ್ಲಿ ಕಾರ್ಯ ನಿರ್ವಹಿಸುತ್ತದೆ.

ಈ ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ.

(1) ಹೇಳಿಕೆ I ತಪ್ಪು ಆದರೆ ಹೇಳಿಕೆ II ಸರಿಯಾಗಿದೆ.
(2) ಹೇಳಿಕೆ I ಸರಿ ಆದರೆ ಹೇಳಿಕೆ II ತಪ್ಪಾಗಿದೆ.
(3) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪಾಗಿವೆ.
(4) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ.

11. ವಿಕಿರಣಶೀಲತೆಯ ಕ್ರಮಾಂಕ ಮತ್ತು SI ಏಕಮಾನ ಕ್ರಮವಾಗಿ ಈ ಕೆಳಗಿನವುಗಳಲ್ಲಿ ಯಾವುದು ?

(1) ಮೊದಲನೆಯ ಕ್ರಮಾಂಕ ಕ್ರಿಯೆ ಮತ್ತು ಬೆಕ್ವೆರೆಲ್
(2) ಶೂನ್ಯ ಕ್ರಮಾಂಕ ಕ್ರಿಯೆ ಮತ್ತು ಕ್ಯೂರಿ
(3) ಮೊದಲನೆಯ ಕ್ರಮಾಂಕ ಕ್ರಿಯೆ ಮತ್ತು ಎರಡನೆಯ ಕ್ರಮಾಂಕ
(4) ಎರಡನೆಯ ಕ್ರಮಾಂಕ ಕ್ರಿಯೆ ಮತ್ತು ಹರ್ಟ್ಜ್

12. ಇವುಗಳಲ್ಲಿ ನಾಲ್ಕು "ಹ್ಯಾಪಿ ಹಾರ್ಮೋನು"ಗಳು

(1) ಬೆಳವಣಿಗೆ ಹಾರ್ಮೋನ್, ಆಕ್ಸಿಟೋಸಿನ್, ಸೆರಟೋನಿನ್, ಎಂಡೋರ್ಫಿನ್ಸ್

(2) ಪ್ಯಾರಥೈರಾಯ್ಡ್, ಆಕ್ಸಿಟೋಸಿನ್, ಸೆರಟೋನಿನ್, ಎಂಡೋರ್ಫಿನ್ಸ್

(3) ಡೋಪಮೈನ್, ಆಕ್ಸಿಟೋಸಿನ್, ಸೆರಟೋನಿನ್, ಗ್ಲುಕಾಗಾನ್

(4) ಡೋಪಮೈನ್, ಆಕ್ಸಿಟೋಸಿನ್, ಸೆರಟೋನಿನ್, ಎಂಡೋರ್ಫಿನ್ಸ್

13. ಯಾವ ಅಧಿಕ ತಾಪಮಾನದಲ್ಲಿ ಫೆರೋಮ್ಯಾಗ್ನೆಟಿಕ್ ವಸ್ತುವು ಪ್ಯಾರಾಮ್ಯಾಗ್ನೆಟಿಕ್ ಆಗಿ ಬದಲಾಗುತ್ತದೆ ?

(1) ನಿರ್ಣಾಯಕ ತಾಪಮಾನ (2) ಕ್ಯೂರಿ ತಾಪಮಾನ (3) ವಿಲೋಮ ತಾಪಮಾನ (4) ಬಾಯ್ಲ್ ತಾಪಮಾನ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

14. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ, ಕೆಳಗೆ ನೀಡಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

| | ಪಟ್ಟಿ-I | | ಪಟ್ಟಿ-II |
|---|---|---|---|
| a. | ಮೈಟೋಕಾಂಡ್ರಿಯ | i. | ಜೀವಕೋಶದ ಅಡುಗೆ ಕೋಣೆ |
| b. | ಕ್ಲೋರೋಪ್ಲಾಸ್ಟ್ | ii. | ಪ್ರೋಟೀನ್ ಕಾರ್ಖಾನೆಗಳು |
| c. | ರೈಬೋಸೋಮ್‌ಗಳು | iii. | ಆತ್ಮಹತ್ಯೆ ಚೀಲಗಳು |
| d. | ಲೈಸೋಸೋಮ್‌ಗಳು | iv. | ಜೀವಕೋಶದ ಶಕ್ತಿ ಮನೆ |

**Codes :**

(1) a-iv, b-i, c-iii, d-ii
(2) a-iv, b-ii, c-iii, d-i
(3) a-iv, b-i, c-ii, d-iii
(4) a-iv, b-iii, c-i, d-ii

15. ಕ್ಯಾನ್ಸರ್ ನಿರೋಧಕ ಔಷಧಿ ವಿನ್‌ಕ್ರಿಸ್ಟಿನ್ ಅನ್ನು ಯಾವುದರಿಂದ ಪಡೆಯಬಹುದು ?

(1) ಅಲೋವೆರಾ (2) ಅಜಾರ್ಡಿರಾಕ್ಟಾ ಇಂಡಿಕಾ (3) ಮರ್ರೈ ಪ್ಯಾನಿಕುಲೇಟಾ (4) ವಿನ್ಕಾ ರೋಸಿಯಾ

16. ಆಧುನಿಕ ಜೈವಿಕ ತಂತ್ರಜ್ಞಾನದ ಹುಟ್ಟಿಗೆ ಕಾರಣವಾದ ಪ್ರಮುಖ ತಂತ್ರಗಳು

(1) ಜೈವಿಕ ಪ್ರಕ್ರಿಯೆ ಇಂಜಿನಿಯರಿಂಗ್ ಮತ್ತು ಜೈವಿಕ ಮಾಹಿತಿ ಶಾಸ್ತ್ರ
(2) ರಾಸಾಯನಿಕ ಇಂಜಿನಿಯರಿಂಗ್ ಮತ್ತು ಜೈವಿಕ ಪ್ರಕ್ರಿಯೆ ಇಂಜಿನಿಯರಿಂಗ್
(3) ವಂಶವಾಹಿ ಇಂಜಿನಿಯರಿಂಗ್ ಮತ್ತು ಪುನರ್‌ಸಂಯೋಜಿತ ಡಿಎನ್‌ಎ ತಂತ್ರಜ್ಞಾನ
(4) ಜೈವಿಕ ಪ್ರಕ್ರಿಯೆ ಇಂಜಿನಿಯರಿಂಗ್ ಮತ್ತು ವಂಶವಾಹಿ ಇಂಜಿನಿಯರಿಂಗ್

17. 2008 ರಲ್ಲಿ ಲೆಫ್ಟಿನೆಂಟ್ ಕರ್ನಲ್ ಗೌರವ ಶ್ರೇಣಿಯನ್ನು ಪಡೆದ ಮೊದಲ ಕ್ರಿಕೆಟಿಗ ಯಾರು ?

(1) ರಾಹುಲ್ ದ್ರಾವಿಡ್ (2) ಕಪಿಲ್ ದೇವ್ (3) ನವಜೋತ್‌ಸಿಂಗ್ ಸಿದ್ದು (4) ಅಜಯ್ ಜಡೇಜಾ

18. ಚಳಿಗಾಲದಲ್ಲಿ ಎರಡು ಪದರಗಳ ಬಟ್ಟೆಗಳು ನಮ್ಮ ದೇಹವನ್ನು ಬೆಚ್ಚಗಿಡಲು ಸಹಾಯ ಮಾಡುತ್ತವೆ. ಏಕೆಂದರೆ

(1) ಅವುಗಳು ನಮ್ಮ ದೇಹದಿಂದ ಉಷ್ಣವನ್ನು ಹೀರಿಕೊಳ್ಳುತ್ತವೆ.
(2) ಎರಡು ಪದರಗಳ ನಡುವೆ ಇರುವ ಗಾಳಿಯು ಉಷ್ಣವು ಹೊರಹೋಗದಂತೆ ತಡೆಯುತ್ತದೆ.
(3) ಅವುಗಳು ಹೊರಗಿನಿಂದ ಉಷ್ಣವು ದೇಹಕ್ಕೆ ಪ್ರವೇಶಿಸದಂತೆ ತಡೆಯುತ್ತವೆ.
(4) ಅವುಗಳು ಉತ್ತಮ ಉಷ್ಣವಾಹಕಗಳಾಗಿರುತ್ತವೆ.

19. ಈ ಕೆಳಗಿನವುಗಳಲ್ಲಿ ಯಾವುದು ವಾಹಕ ಜನ್ಯ ರೋಗವಲ್ಲ ?

(1) ಟೈಫಾಯಿಡ್ (2) ಚಿಕುನ್‌ಗುನ್ಯಾ (3) ಮಲೇರಿಯಾ (4) ಫೈಲೇರಿಯಾಸಿಸ್

20. ಈ ಕೆಳಗಿನವುಗಳಲ್ಲಿ ಯಾವುದು ಹಸು ತಳಿಯಲ್ಲ ?

(1) ಹಳ್ಳಿಕಾರ್ (2) ಜೆರ್ಸಿ (3) ಸಹಿವಾಲ್ (4) ಲೆಗ್‌ಹಾರ್ನ್

ಕಚ್ಚಾ ಕಾರ್ಯಕ್ಕಾಗಿ ಸ್ಥಳ

SHIKARAT.COM
741867



Scanned with OKEN Scanner

21. ವಿಶ್ವ ಮಾನವ ಹಕ್ಕುಗಳ ದಿನವನ್ನು ಎಂದು ಆಚರಿಸಲಾಗುತ್ತದೆ ?

(1) ಜೂನ್ 10 (2) ಮೇ 10 (3) ಜನವರಿ 10 (4) ಡಿಸೆಂಬರ್ 10

22. ದಾಳಿ ಮಾಡಲು ಸಿದ್ಧವಾಗಿರುವ ಸರ್ಪವನ್ನು ಹೋಲುವ ಆಸನದ ರೂಪ

(1) ಭುಜಂಗಾಸನ (2) ಬಕಾಸನ (3) ಕೂರ್ಮಾಸನ (4) ಮಯೂರಾಸನ

23. BWF-ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಶಿಪ್ – 2026 ಆಯೋಜಿಸಲ್ಪಡುವ ಸ್ಥಳ ________.

(1) ಜಕಾರ್ತಾ, ಇಂಡೋನೇಷ್ಯಾ (2) ಪ್ಯಾರಿಸ್, ಫ್ರಾನ್ಸ್

(3) ಟೋಕಿಯೋ, ಜಪಾನ್ (4) ನವದೆಹಲಿ, ಭಾರತ

24. ಈ ಕೆಳಗಿನ ಯಾರು "ದಿ ಗ್ರೇಟೆಸ್ಟ್" ಎಂದು ಬಿರುದಾಂಕಿತರಾಗಿದ್ದರು ?

(1) ಜೋ ಫ್ರೇಜಿಯರ್ (2) ಫ್ಲಾಯ್ಡ್ ಮೇವೆದರ್

(3) ಮುಹಮ್ಮದ್ ಅಲಿ (4) ಮೈಕ್ ಟೈಸನ್

25. ನಾಸಾ ದ ಆರ್ಟೆಮಿಸ್ II ಮಿಷನ್‌ನ ಪ್ರಾಥಮಿಕ ಉದ್ದೇಶವೇನು ?

(1) ಗುರು ಗ್ರಹದ ವಾತಾವರಣವನ್ನು ಅಧ್ಯಯನ ಮಾಡುವುದು.

(2) ಚಂದ್ರನ ಮೇಲೆ ಖಾಯಂ ಆದ ಮಾನವ ವಸಾಹತು ಸ್ಥಾಪಿಸುವುದು.

(3) ಗಗನಯಾತ್ರಿಗಳನ್ನು ಚಂದ್ರನ ಸುತ್ತ ಕಳುಹಿಸುವುದು ಮತ್ತು ಅವರನ್ನು ಸುರಕ್ಷಿತವಾಗಿ ಭೂಮಿಗೆ ಮರಳಿ ಕರೆ ತರುವುದು.

(4) ಮಾನವರನ್ನು ಮಂಗಳ ಗ್ರಹಕ್ಕೆ ಕಳುಹಿಸುವುದು.

26. ಕೆಆರ್‌ಐಡಿಎಲ್ – ವಿಸ್ತರಿಸಿ.

(1) ಕರ್ನಾಟಕ ರೂರಲ್ ಇನ್‌ಫ್ರಿಂಜ್‌ಮೆಂಟ್ ಡೆವೆಲಪ್‌ಮೆಂಟ್ ಲಿಮಿಟೆಡ್

(2) ಕರ್ನಾಟಕ ರೂರಲ್ ಇಂಟಿಗ್ರೇಟೆಡ್ ಡೆವೆಲಪ್‌ಮೆಂಟ್ ಲಿಮಿಟೆಡ್

(3) ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್

(4) ಕರ್ನಾಟಕ ರೂರಲ್ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಲಿಮಿಟೆಡ್

27. ದೋಹಾ ಒಪ್ಪಂದವು ಯಾವ ಎರಡು ದೇಶಗಳ ನಡುವೆ ಸಹಿ ಹಾಕಲ್ಪಟ್ಟಿದೆ ?

(1) ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಮತ್ತು ತಾಲಿಬಾನ್ (2) ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಮತ್ತು ಚೀನಾ

(3) ಭಾರತ ಮತ್ತು ಚೀನಾ (4) ಭಾರತ ಮತ್ತು ಪಾಕಿಸ್ತಾನ

28. ಈ ಕೆಳಗಿನವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

(a) ಲೀಗ್ ಆಫ್ ನೇಶನ್ಸ್ ಸ್ಥಾಪನೆ (b) ಬ್ರಿಕ್ಸ್ ಸ್ಥಾಪನೆ

(c) ಸಾರ್ಕ್ ಸ್ಥಾಪನೆ (d) ವಿಶ್ವಸಂಸ್ಥೆಯ ಸ್ಥಾಪನೆ

(1) (a), (b), (d), (c) (2) (a), (d), (c), (b) (3) (d), (b), (c), (a) (4) (c), (a), (b), (d)

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

29. APAAR – ಅನ್ನು ವಿಸ್ತರಿಸಿ.

(1) ಆಟೋಮೇಟೆಡ್ ಪರ್ಮನೆಂಟ್ ಅಕಾಡೆಮಿಕ್ ಅಕೌಂಟ್ ರಿಜಿಸ್ಟ್ರಿ
(2) ಆಟೋಮೇಟೆಡ್ ಪರ್ಮನೆಂಟ್ ಆಡಿಟ್ ಅಕೌಂಟ್ ರಿಜಿಸ್ಟರ್
(3) ಅಕ್ಸೆಸ್ ಪರ್ಮನೆಂಟ್ ಅಕಾಡೆಮಿಕ್ ಆಡಿಟ್ ರಿಜಿಸ್ಟ್ರಿ
(4) ಅಕ್ಸೆಸ್ ಪ್ರೈಮರಿ ಅಕಾಡೆಮಿಕ್ ಅಕೌಂಟ್ ರಿಜಿಸ್ಟರ್

30. ಕರ್ನಾಟಕದ 'ಕೃತಕ ಬುದ್ಧಿಮತ್ತೆ ಉತ್ಕೃಷ್ಟತಾ ಕೇಂದ್ರ'ವನ್ನು ಸ್ಥಾಪಿಸಲು ಯಾವ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ ?

(1) ಐಐಎಂ ಬೆಂಗಳೂರು (2) ಐಐಟಿ ಧಾರವಾಡ
(3) ಐಐಎಸ್‌ಸಿ ಬೆಂಗಳೂರು (4) ಐಐಐಟಿ ರಾಯಚೂರು

31. 2026 ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅತ್ಯಾಧುನಿಕ ಪ್ರಮುಖ ಸೆಮಿಕಂಡಕ್ಟರ್ ಘಟಕವನ್ನು ಈ ಕೆಳಗಿನ ಯಾವ ಸ್ಥಳದಲ್ಲಿ ಉದ್ಘಾಟಿಸಿದರು ?

(1) ಬೆಂಗಳೂರು (2) ಅಹಮದಾಬಾದ್ (3) ನೋಯ್ಡಾ (4) ಸಾನಂದ್

32. "ವಿಶ್ವಾಸ, ನಿರ್ಮಾಣ ಮತ್ತು ಜನ ಕಲ್ಯಾಣ" ಚೌಕಟ್ಟು ಭಾರತ ಸರ್ಕಾರದ ಯಾವ ಉಪಕ್ರಮದ ಮೂಲ ತಂತ್ರವಾಗಿದೆ ?

(1) ಹಣಕಾಸು ಒಳಗೊಳ್ಳುವಿಕೆ (2) ಸ್ವಚ್ಛ ಭಾರತ ಮಿಷನ್ (3) ನಕ್ಸಲ್-ಮುಕ್ತ ಭಾರತ (4) ಆತ್ಮನಿರ್ಭರ್ ಭಾರತ್

33. ಯಾವ ಹಿಂದಿನ ಕಾಯ್ದೆಯನ್ನು ರದ್ದುಗೊಳಿಸಲು 2026ರ ನ್ಯಾಯಮಂಡಳಿ ಸುಧಾರಣಾ ಮಸೂದೆ ಉದ್ದೇಶಿಸಿದೆ ?

(1) ಆಡಳಿತಾತ್ಮಕ ನ್ಯಾಯಮಂಡಳಿಗಳ ಕಾಯ್ದೆ, 1985
(2) ನ್ಯಾಯಮಂಡಳಿ ಸುಧಾರಣಾ ಕಾಯ್ದೆ, 2017
(3) ರಾಷ್ಟ್ರೀಯ ನ್ಯಾಯಮಂಡಳಿಗಳ ಆಯೋಗ ಕಾಯ್ದೆ, 2019
(4) ನ್ಯಾಯಮಂಡಳಿ ಸುಧಾರಣಾ ಕಾಯ್ದೆ, 2021

34. ಆಂತರಿಕ ಗ್ರಹಗಳಾವುವು ?

(1) ಭೂಮಿ, ಮಂಗಳ, ಗುರು, ಶನಿ (2) ಗುರು, ಶನಿ, ಯುರೇನಸ್, ನೆಪ್ಚೂನ್
(3) ಬುಧ, ಶುಕ್ರ, ಭೂಮಿ, ಮಂಗಳ (4) ಬುಧ, ಶುಕ್ರ, ಗುರು, ಮಂಗಳ

35. ಇತ್ತೀಚೆಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ICAR) ಹಾಗೂ ರಾಷ್ಟ್ರೀಯ ಪ್ರಾಣಿ ತಳಿ ಸಂಪನ್ಮೂಲ ಸಂಸ್ಥೆಯಿಂದ (NBAGR) ಯಾವ ಎರಡು ರಾಜ್ಯಗಳಲ್ಲಿ ಸಾಕುವ ಮಾಡ್ಗ್ಯಾಳ್ ಕುರಿ ತಳಿಯನ್ನು ನೋಂದಾಯಿಸಲಾಯಿತು ?

(1) ಕರ್ನಾಟಕ – ತೆಲಂಗಾಣ (2) ಕರ್ನಾಟಕ – ಆಂಧ್ರ ಪ್ರದೇಶ
(3) ಕರ್ನಾಟಕ – ತಮಿಳುನಾಡು (4) ಕರ್ನಾಟಕ – ಮಹಾರಾಷ್ಟ್ರ

36. ಮೆಕ್ಕಾ ಜಂಟಿ ರಕ್ಷಣಾ ಒಪ್ಪಂದ – 2026 ಕ್ಕೆ ಕೆಳಗಿನ ಯಾವ ಮೂರು ದೇಶಗಳು ಭಾಗಿಯಾಗಿವೆ ?

(1) ಸೌದಿ ಅರೇಬಿಯಾ, ಯುಎಇ ಮತ್ತು ಟರ್ಕಿ (2) ಟರ್ಕಿ, ಕತಾರ್ ಮತ್ತು ಪಾಕಿಸ್ತಾನ
(3) ಸೌದಿ ಅರೇಬಿಯಾ, ಇರಾನ್ ಮತ್ತು ಪಾಕಿಸ್ತಾನ (4) ಸೌದಿ ಅರೇಬಿಯಾ, ಪಾಕಿಸ್ತಾನ ಮತ್ತು ಟರ್ಕಿ

37. 2026 ರ ಗ್ಲ್ಯಾಸ್ಗೋ ಕಾಮನ್‌ವೆಲ್ತ್ ಕ್ರೀಡಾಕೂಟದಿಂದ ಈ ಕೆಳಗಿನ ಯಾವ ಕ್ರೀಡೆಗಳನ್ನು ಕೈಬಿಡಲಾಯಿತು ?

a. ಬ್ಯಾಡ್ಮಿಂಟನ್ b. ಟೇಬಲ್ ಟೆನ್ನಿಸ್ c. ಬಾಕ್ಸಿಂಗ್ d. ಹಾಕಿ

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಆಯ್ಕೆ ಮಾಡಿ :

(1) a, b ಮತ್ತು d (2) c ಮತ್ತು d (3) b ಮತ್ತು c (4) a ಮತ್ತು b

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

38. ಕರ್ನಾಟಕ ಪೋಲೀಸ್ ಅಕಾಡೆಮಿಯ ಧ್ಯೇಯವಾಕ್ಯವು ಈ ಕೆಳಗಿನ ಯಾವ ಮೌಲ್ಯಗಳನ್ನು ಒಳಗೊಂಡಿಲ್ಲ ?

a. ಧೈರ್ಯ b. ಬುದ್ಧಿ c. ಸಾಮರ್ಥ್ಯ d. ಸಾಹಸ e. ಸೇವೆ

(1) c ಮತ್ತು d (2) a ಮತ್ತು e (3) b ಮತ್ತು d (4) a ಮತ್ತು b

39. ವಿವೇಕ್ ಅವರು ಅಧಿಕೃತ ಕೆಲಸಕ್ಕಾಗಿ 'ಬೆಂಗಳೂರು ಒನ್ ಕಚೇರಿ'ಗೆ ಭೇಟಿ ನೀಡಿದ್ದರು. ಆಗ ಮೆಟ್ಟಿಲುಗಳ ಮೂಲೆಯಲ್ಲಿ ಒಬ್ಬ ವ್ಯಕ್ತಿ ಕಸ ಎಸೆಯುವುದನ್ನು ಅವರು ಗಮನಿಸಿದರು. ಅಂತಹ ಪರಿಸ್ಥಿತಿಯಲ್ಲಿ ವಿವೇಕ್ ಏನು ಮಾಡಬೇಕು ?

(1) ಕಸ ಎಸೆದ ವ್ಯಕ್ತಿಗೆ ಕಪಾಳಮೋಕ್ಷ ಮಾಡಬೇಕು.

(2) ಭವಿಷ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕದಂತೆ ಆ ವ್ಯಕ್ತಿಗೆ ಸೌಜನ್ಯದಿಂದ ತಿಳಿಸಬೇಕು.

(3) ಅದನ್ನು ನಿರ್ಲಕ್ಷಿಸಿ ತಮ್ಮ ಕೆಲಸದಲ್ಲಿ ಮುಂದುವರಿಯಬೇಕು.

(4) ಬೆಂಗಳೂರಿಗರಿಗೆ ಶಿಕ್ಷಣ ನೀಡಲು ಬೆಂಗಳೂರು ಒನ್ ಕಚೇರಿಯ ಮುಖ್ಯಸ್ಥರನ್ನು ವಿನಂತಿಸಬೇಕು.

40. ಕೆಳಗೆ ತಿಳಿಸಲಾದ ವಿವಿಧ ಮೌಲ್ಯಗಳನ್ನು ಪರಿಗಣಿಸಿ.

a. ವೈಯಕ್ತಿಕ – ಸಮಗ್ರತೆ, ಕರುಣೆ, ಮತ್ತು ಪ್ರಾಮಾಣಿಕತೆ

b. ವೃತ್ತಿಪರ – ತಪ್ಪನ್ನು ಇತರರ ಮೇಲೆ ಹಾಕುವುದು, ಗಡುವನ್ನು ತಪ್ಪಿಸುವುದು ಮತ್ತು ಶ್ರೇಯಸ್ಸನ್ನು ಕದಿಯುವುದು.

c. ಸಾಂವಿಧಾನಿಕ – ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಜಾತ್ಯಾತೀತತೆ.

ಮೇಲಿನ ಯಾವ ಮೌಲ್ಯ/ಗಳನ್ನು ಸರಿಯಾಗಿ ಹೊಂದಿಸಲಾಗಿದೆ ?

(1) a, b ಮತ್ತು c (2) a ಮತ್ತು c (3) c ಮಾತ್ರ (4) b ಮತ್ತು c

41. ಯಾವ ಜಲಸಂಧಿಯು ಆಸ್ಟ್ರೇಲಿಯಾವನ್ನು ತಾಸ್ಮೇನಿಯಾದಿಂದ ಬೇರ್ಪಡಿಸುತ್ತದೆ ?

(1) ಸುಂದಾ ಜಲಸಂಧಿ (2) ಬಾಸ್ ಜಲಸಂಧಿ (3) ಸುಗಾರು ಜಲಸಂಧಿ (4) ಮಲಕ್ಕಾ ಜಲಸಂಧಿ

42. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

**ಹೇಳಿಕೆ I :** ಭಾರತೀಯ ನೀತಿಶಾಸ್ತ್ರದಲ್ಲಿ ಸಂಯಮವನ್ನು ನೈತಿಕ ಮಾನದಂಡವಾಗಿ ಪರಿಗಣಿಸಲಾಗಿದೆ.

**ಹೇಳಿಕೆ II :** ಭಾರತೀಯ ನೀತಿಶಾಸ್ತ್ರದಲ್ಲಿ ರಾಜಕೀಯ ಕಾನೂನು ಮತ್ತು ದೈವಿಕ ಕಾನೂನು ಎರಡನ್ನೂ ನೈತಿಕ ಮಾನದಂಡಗಳೆಂದು ಉಲ್ಲೇಖಿಸಲಾಗಿದೆ.

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) ಎರಡೂ ಹೇಳಿಕೆಗಳು ತಪ್ಪಾಗಿವೆ. (2) ಎರಡೂ ಹೇಳಿಕೆಗಳು ಸರಿಯಾಗಿವೆ.

(3) ಹೇಳಿಕೆ II ಸರಿ, ಆದರೆ ಹೇಳಿಕೆ I ತಪ್ಪಾಗಿದೆ. (4) ಹೇಳಿಕೆ I ಸರಿ, ಆದರೆ ಹೇಳಿಕೆ II ತಪ್ಪಾಗಿದೆ.

43. ಕ್ಷಮೆಯ ಕುರಿತಾದ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಪ್ರತಿಯೊಬ್ಬರೂ ಎರಡನೇ ಅವಕಾಶಕ್ಕೆ ಅರ್ಹರು.

(b) ಹಾನಿ ಮಾಡಿದವರು ಕ್ಷಮೆ ಕೇಳಿದರೆ ಜನರು ಖಂಡಿತವಾಗಿಯೂ ಕ್ಷಮಿಸಬೇಕು.

(c) ಜನರು ತಮ್ಮ ಆಂತರಿಕ ಶಾಂತಿಗಾಗಿ ಕ್ಷಮಿಸಬಹುದು.

(d) ತಪ್ಪು ಮಾಡಿದವರು ಕ್ಷಮೆ ಕೇಳಿದರೂ ಅವರನ್ನು ಕ್ಷಮಿಸದಿರುವುದು ಕ್ರೂರತೆ.

ಮೇಲಿನ ಹೇಳಿಕೆಗಳಲ್ಲಿ ಎಷ್ಟು ಸರಿಯಾಗಿವೆ ?

(1) ಎಲ್ಲಾ ನಾಲ್ಕು (2) ಮೂರು ಮಾತ್ರ (3) ಎರಡು ಮಾತ್ರ (4) ಒಂದು ಮಾತ್ರ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

SHIKARAT.COM
7418674186
Scanned with OKEN Scanner

44. ಈ ಕೆಳಕಂಡ ಪಟ್ಟಿ-I ರಲ್ಲಿರುವ ಮೈಸೂರು ಒಡೆಯರ ಕಾಲದ ಕೃತಿಗಳನ್ನು ಮತ್ತು ಪಟ್ಟಿ-II ರಲ್ಲಿರುವ ಕೃತಿಕಾರರ ಹೆಸರುಗಳೊಂದಿಗೆ ಹೊಂದಿಸಿ, ಮತ್ತು ಸರಿಯುತ್ತರ ಗುರುತಿಸಿ.

| ಪಟ್ಟಿ-I (ಒಡೆಯರ ಸಾಹಿತ್ಯ ಕೃತಿಗಳು) | ಪಟ್ಟಿ-II (ಕೃತಿಕಾರರು) |
|---|---|
| a. ಪ್ರಾಕೃತಿಕ ಶಬ್ದದೀಪಿಕಾ | i. ರಾಮಕೃಷ್ಣ ಶಾಸ್ತ್ರಿ |
| b. ಯಾದವ ರಾಘವ ಪಾಂಡವೀಯ | ii. ಮುಮ್ಮಡಿ ಕೃಷ್ಣರಾಜ ಒಡೆಯರ್ |
| c. ಸೂರ್ಯಚಂದ್ರಾದಿ ವಂಶಾವತರಣ | iii. ಕಾಕನಹಳ್ಳಿ ನರಸಿಂಹಶಾಸ್ತ್ರಿ |
| d. ಭುವನ ಪ್ರದೀಪಿಕಾ | iv. ಅನಂತಾಚಾರ್ಯ |

ಸಂಕೇತಗಳು :

(1) a-i, b-ii, c-iii, d-iv
(2) a-iii, b-iv, c-ii, d-i
(3) a-iv, b-i, c-iii, d-ii
(4) a-iii, b-ii, c-i, d-iv

45. ಕಾವೇರಿ ಜಲಾಶಯಕ್ಕೆ ಚಿಕ್ಕದೇವರಾಜ ನಾಲೆ ಮತ್ತು ದೇವರಾಜ ನಾಲೆ ಎಂಬ ಕಾಲುವೆಗಳನ್ನು ನಿರ್ಮಿಸಿದವರು ಯಾರು?

(1) ನಾಲ್ವಡಿ ಕೃಷ್ಣರಾಜ ಒಡೆಯರ್
(2) ಮುಮ್ಮಡಿ ಕೃಷ್ಣರಾಜ ಒಡೆಯರ್
(3) ಚಿಕ್ಕದೇವರಾಜ ಒಡೆಯರ್
(4) ಕಂಠೀರವ ನರಸರಾಜ ಒಡೆಯರ್

46. ಈ ಕೆಳಕಂಡ ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಸರಿಯಾಗಿ ಹೊಂದಿಸಿ!

| ಪಟ್ಟಿ-I (ವಿದೇಶಿ ಪ್ರವಾಸಿಗರು) | ಪಟ್ಟಿ-II (ವಿಜಯನಗರ ಅರಸರು) |
|---|---|
| a. ನ್ಯೂನಿಜ್ | i. ದೇವರಾಯ-I |
| b. ಡೊಮಿಂಗೋ ಪೇಸ್ | ii. ದೇವರಾಯ-II |
| c. ಅಬ್ದುರ್ ರಜಾಕ್ | iii. ಶ್ರೀ ಕೃಷ್ಣದೇವರಾಯ |
| d. ನಿಕೊಲೋ ಡಿ' ಕಾಂಟಿ | iv. ಅಚ್ಯುತರಾಯ |

(1) a-iv, b-iii, c-ii, d-i
(2) a-i, b-ii, c-iii, d-iv
(3) a-ii, b-i, c-iv, d-iii
(4) a-iii, b-iv, c-i, d-ii

47. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ.

**ಹೇಳಿಕೆ I :** ಬ್ರಹ್ಮಪುರಿಗಳು ನಗರದ ಬ್ರಾಹ್ಮಣರ ಕಾಲೊನಿಗಳಾಗಿದ್ದವು.

**ಹೇಳಿಕೆ II :** ಬ್ರಹ್ಮಪುರಿಗಳು ಒಂದು ನಗರ ಅಥವಾ ಪಟ್ಟಣದ ಭಾಗವಾಗಿದ್ದವು.

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪಾಗಿವೆ
(2) ಹೇಳಿಕೆ I ತಪ್ಪಾಗಿದೆ, ಆದರೆ ಹೇಳಿಕೆ II ಸರಿಯಾಗಿದೆ
(3) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ
(4) ಹೇಳಿಕೆ I ಸರಿಯಾಗಿದೆ, ಆದರೆ ಹೇಳಿಕೆ II ತಪ್ಪಾಗಿದೆ

48. ಈ ಕೆಳಗಿನವರುಗಳಲ್ಲಿ ತಕ್ಕೋಳಂ ಕದನದಲ್ಲಿ ಭಾಗವಹಿಸಿದ ರಾಷ್ಟ್ರಕೂಟ ರಾಜ ಯಾರು ?

(1) ಒಂದನೇ ಅಮೋಘವರ್ಷ (2) ಮೂರನೇ ಗೋವಿಂದ (3) ಮೂರನೇ ಕೃಷ್ಣ (4) ಮೂರನೇ ಇಂದ್ರ

49. ಒಂದು ಬೇಟೆನಾಯಿಯನ್ನು ಗೌರವಿಸಲು ಗಂಗರ ಕಾಲದಲ್ಲಿ ನಿರ್ಮಿಸಲಾದ ಶಾಸನ ______.

(1) ಶ್ರವಣಬೆಳಗೊಳ ಶಾಸನ (2) ತಲಕಾಡು ಶಾಸನ (3) ಆತಕೂರು ಶಾಸನ (4) ಬೇಗೂರು ಶಾಸನ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

SHIKSHAK.COM



Scanned with OKEN Scanner

50. 1890 ರಲ್ಲಿ ಸ್ಥಾಪಿತವಾದ ಮೈಸೂರಿನ ಪುರಾತತ್ವ ಇಲಾಖೆಯ ಮೊದಲ ಮುಖ್ಯಸ್ಥರು ಯಾರು ?

(1) ಎಂ.ಎಚ್. ಕೃಷ್ಣ (2) ಎ. ಕನ್ನಿಂಗ್‌ಹ್ಯಾಂ (3) ಡಿ.ಎಲ್. ನರಸಿಂಹಾಚಾರ್ (4) ಬಿ.ಎಲ್. ರೈಸ್

51. 'ಅರುವೈ', 'ಅರುವೈ ವಣಿಗಾರ್', 'ಅರುವೈ ವಿಡಿ' ಈ ಪದಗಳು ಸಂಬಂಧಿಸಿರುವುದು

(1) ಮೀನುಗಾರಿಕೆ (2) ಕೃಷಿ (3) ವ್ಯಾಪಾರ (4) ಜವಳಿ ಉದ್ಯಮ

52. 'ಚೋಳಗಂಗಂ' ಎಂಬುದು

(1) ಸಾಹಿತ್ಯ ಕೃತಿ (2) ದೊಡ್ಡ ದೇವಾಲಯ (3) ದೊಡ್ಡ ಕೆರೆ (4) ದೊಡ್ಡ ನಗರ

53. ಈ ಕೆಳಗಿನ ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯುತ್ತರ ಗುರುತಿಸಿ.

| ಪಟ್ಟಿ-I (ಮಹಾಜನಪದದ ಹೆಸರು) | | ಪಟ್ಟಿ-II (ರಾಜಧಾನಿ ಹೆಸರು) | |
|---|---|---|---|
| a. | ಅವಂತಿ | i. | ತಕ್ಷಶಿಲಾ |
| b. | ಅಂಗ | ii. | ಸುಕ್ತಿಮಹಾನಿ |
| c. | ಚೇದಿ | iii. | ಉಜ್ಜಯಿನಿ |
| d. | ಗಾಂಧಾರ | iv. | ಚಂಪಾ |

(1) a-iii, b-iv, c-i, d-ii (2) a-iii, b-iv, c-ii, d-i
(3) a-i, b-ii, c-iv, d-iii (4) a-ii, b-i, c-iv, d-iii

54. 1628 ರ ಬೆಂಗಳೂರಿನ ಯಾವ ದೇವಾಲಯದ ಶಾಸನವು ಇದನ್ನು ಪ್ರವರ್ಧಮಾನಕ್ಕೆ ಬರುತ್ತಿರುವ ವಾಣಿಜ್ಯ ಕೇಂದ್ರ–ವಾಗಿತ್ತೆಂದು ತೋರಿಸುತ್ತದೆ ?

(1) ರಂಗನಾಥಸ್ವಾಮಿ ದೇವಾಲಯ (2) ಕೋಟೆ ವೆಂಕಟರಮಣಸ್ವಾಮಿ ದೇವಾಲಯ
(3) ಗವಿಗಂಗಾಧರೇಶ್ವರ ದೇವಾಲಯ (4) ಸೋಮೇಶ್ವರ ದೇವಾಲಯ

55. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

**ಹೇಳಿಕೆ I** : 1908 ರಲ್ಲಿ ಮೈಸೂರು ವೃತ್ತ ಪತ್ರಿಕಾ ನಿಯಂತ್ರಣ ಕಾಯ್ದೆ ಜಾರಿಗೆ ಬಂದಿದ್ದರಿಂದ ಅನೇಕ ಪತ್ರಿಕೆಗಳು ಮೈಸೂರಿನಲ್ಲಿ ಪ್ರತಿಭಟನಾರ್ಥವಾಗಿ ಮುಚ್ಚಿದವು.

**ಹೇಳಿಕೆ II** : ಈ ಸಂದರ್ಭದಲ್ಲಿ ಟಿ. ಆನಂದರಾವ್ ಮೈಸೂರಿನ ದಿವಾನರಾಗಿದ್ದರು.

ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ ?

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪಾಗಿವೆ (2) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ
(3) ಹೇಳಿಕೆ II ಮಾತ್ರ ಸರಿಯಾಗಿದೆ (4) ಹೇಳಿಕೆ I ಮಾತ್ರ ಸರಿಯಾಗಿದೆ

56. ಹಿಂದೂಸ್ತಾನಿ ಸೇವಾದಳಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a. ಕಾಂಗ್ರೆಸ್ ಅಧಿವೇಶನಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಅಧಿಕೃತವಾಗಿ ಹಾರಿಸುವ ಒಂದು ಹೊಸ ಸಂಪ್ರದಾಯವನ್ನು ಇದು ಹುಟ್ಟು ಹಾಕಿತು.

b. ಅಖಿಲ ಭಾರತೀಯ ಕಾಂಗ್ರೆಸ್‌ನೊಂದಿಗೆ ವಿಲೀನಗೊಳ್ಳಲು ಇದು ನಿರಾಕರಿಸಿತು.

c. ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಇದು ಮಹತ್ವಪೂರ್ಣ ಪಾತ್ರ ವಹಿಸಿದ್ದರಿಂದ ಗಾಂಧೀಜಿಯವರು ಅತೃಪ್ತಿಗೊಂಡಿದ್ದರು.

ಮೇಲಿನ ಹೇಳಿಕೆಗಳಲ್ಲಿ ಎಷ್ಟು ಸರಿಯಾಗಿದೆ/ವೆ ?

(1) ಯಾವ ಹೇಳಿಕೆಗಳೂ ಸರಿಯಲ್ಲ (2) ಎಲ್ಲಾ ಮೂರು ಹೇಳಿಕೆಗಳೂ ಸರಿಯಾಗಿವೆ
(3) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ (4) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

57. ಸ್ತ್ರೀಯರ ಸ್ಥಾನಮಾನ ಸುಧಾರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಕಾಯಿದೆಗಳು ಮತ್ತು ಅವುಗಳು ಜಾರಿಗೆ ಬಂದ ವರ್ಷಗಳನ್ನು ನೀಡಲಾಗಿದ್ದು, ಅವುಗಳಲ್ಲಿ ಎಷ್ಟು ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿವೆ ?

(a) ಸತಿ ಪದ್ಧತಿಯ ನಿಷೇಧ ಕಾಯಿದೆ, 1829
(b) ಹಿಂದೂ ವಿಧವಾ ಮರುವಿವಾಹ ಕಾಯಿದೆ, 1856
(c) ಹೆಣ್ಣು ಶಿಶುಹತ್ಯೆ ತಡೆ ಕಾಯಿದೆ, 1804
(d) ಬಾಲ್ಯ ವಿವಾಹ ನಿಯಂತ್ರಣ ಕಾಯಿದೆ, 1872

(1) ಕೇವಲ ಒಂದು ಸರಿಯಾಗಿದೆ
(2) ಕೇವಲ ಎರಡು ಸರಿಯಾಗಿವೆ
(3) ಕೇವಲ ಮೂರು ಸರಿಯಾಗಿವೆ
(4) ಎಲ್ಲಾ ನಾಲ್ಕು ಸರಿಯಾಗಿವೆ

58. ಈ ಕೆಳಗಿನ ಯಾರು 1857 ರ ದಂಗೆಗೆ ಸಂಬಂಧಿಸಿದಂತೆ, 'ಇದು ನಾಗರಿಕತೆ ಮತ್ತು ಅನಾಗರಿಕತೆಗಳ ನಡುವಿನ ಸಂಘರ್ಷ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ?

(1) ಜೇಮ್ಸ್ ಔಟ್ರಾಮ್ (2) ಅಲೆಗ್ಸಾಂಡರ್ ಡಫ್ (3) ಪಿ.ಇ. ರಾಬರ್ಟ್ಸ್ (4) ಟಿ.ಆರ್. ಹೋಲ್ಮ್ಸ್

59. ಲಾರ್ಡ್ ಡಾಲ್‌ಹೌಸಿಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?

(a) ಭಾರತದ ಪ್ರಮುಖ ಬ್ರಿಟೀಷ್ ಗವರ್ನರ್ ಜನರಲ್
(b) ಭಾರತದಲ್ಲಿ ವಿಧವಾ ಪುನರ್ ವಿವಾಹ ಕಾಯ್ದೆಯನ್ನು ಜಾರಿಗೆ ತಂದರು.
(c) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಪರಿಚಯಿಸಿದರು.
(d) ಇಲ್ಬರ್ಟ್ ಮಸೂದೆಯ ವಿವಾದದಿಂದಾಗಿ ಇವರು ರಾಜೀನಾಮೆ ನೀಡಿದರು.

ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) (b), (c) ಮತ್ತು (d) (2) (a), (c) ಮತ್ತು (d) (3) (a), (b) ಮತ್ತು (c) (4) (a) ಮತ್ತು (b)

60. 'ಪಾಕಿಸ್ತಾನ' ಎಂಬ ಹೆಸರನ್ನು ಸೂಚಿಸಿದವರಾರು ?

(a) ಸಿಕಂದರ್ ಹಯಾತ್ ಖಾನ್
(b) ಮಹಮ್ಮದ್ ಅಲಿ ಜಿನ್ನಾ
(c) ಮಹಮ್ಮದ್ ಇಕ್ಬಾಲ್
(d) ಚೌಧರಿ ರೆಹಮತ್ ಅಲಿ

(1) (d) ಮಾತ್ರ (2) (c) ಮಾತ್ರ (3) (b) ಮಾತ್ರ (4) (a) ಮಾತ್ರ

61. ಶೇರ್ ಷಾ ಸೂರಿ ಯ ಆಡಳಿತಕ್ಕೆ ಸಂಬಂಧಿಸಿದಂತೆ ಕೆಳಗಿನವುಗಳನ್ನು ಹೊಂದಿಸಿ.

| ಪಟ್ಟಿ-I (ಇಲಾಖೆ) | | ಪಟ್ಟಿ-II (ಕಾರ್ಯ) | |
|---|---|---|---|
| a. | ದಿವಾನ್-ಇ-ವಿಜಾರತ್ | i. | ವಿದೇಶಾಂಗ ವ್ಯವಹಾರ |
| b. | ದಿವಾನ್-ಇ-ಮಹ್ತಾಸಿಬ್ | ii. | ಹಣಕಾಸು |
| c. | ದಿವಾನ್-ಇ-ಆರಿಜ್ | iii. | ಸರ್ಕಾರಿ ದಾಖಲೆಗಳು |
| d. | ದಿವಾನ್-ಇ-ಇನ್ಶಾ | iv. | ರಕ್ಷಣೆ |

(1) a-iv, b-iii, c-ii, d-i
(2) a-iv, b-ii, c-iii, d-i
(3) a-iii, b-ii, c-i, d-iv
(4) a-ii, b-i, c-iv, d-iii

62. ಅಮೀರ್ ಖುಸ್ರುವಿನ 'ಖಜಾಯಿನ್ ಉಲ್ ಫುತುಹ್' ಕೃತಿಯು ಈ ಕೆಳಗಿನ ಯಾರ ನಡುವಣ ಪ್ರೇಮಕಥನವಾಗಿದೆ ?

(1) ಷಹಜಹಾನ್ ಮತ್ತು ಮುಮ್ತಾಜ್ ಮಹಲ್
(2) ರಾಜಾ ಸುಲೈಮಾನ್ ಮತ್ತು ಶೇಭಾ
(3) ಅಕ್ಬರ್ ಮಹಾಶಯ ಮತ್ತು ಜೋಧಾಬಾಯಿ
(4) ಸಲೀಂ ಮತ್ತು ಅನಾರ್ಕಲಿ

63. 'ಜಿಲ್ಲಿ – ಇಲ್ಲಾಹ್' ಎಂಬ ಬಿರುದನ್ನು ಯಾರು ಪಡೆದಿದ್ದರು ?

(1) ಬಹರಾಮ್ ಷಾ (2) ಜಲಾಲ್-ಉದ್-ದೀನ್ (3) ಬಲ್ಬನ್ (4) ರಜಿಯಾ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



SHIKARAT.COM
Scanned with OKEN Scanner

64. ಈ ಕೆಳಕಂಡ ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ, ಸರಿಯುತ್ತರವನ್ನು ಆರಿಸಿರಿ.

| ಪಟ್ಟಿ-I (ಬುಡಕಟ್ಟುಗಳು) | ಪಟ್ಟಿ-II (ಪ್ರದೇಶಗಳು) |
|---|---|
| a. ಬುಷ್‌ಮನ್‌ಗಳು | i. ತಂಡ್ರಾ ಪ್ರದೇಶ |
| b. ಪಿಗ್ಮಿಗಳು | ii. ಅರೇಬಿಯನ್ ಮರುಭೂಮಿ |
| c. ಎಸ್ಕಿಮೋಗಳು | iii. ಕಾಂಗೋ ಪ್ರದೇಶ |
| d. ಬೆಡೊಯಿನ್‌ಗಳು | iv. ಕಲಹರಿ ಮರುಭೂಮಿ |

(1) a-iv, b-iii, c-i, d-ii
(2) a-i, b-iv, c-iii, d-ii
(3) a-ii, b-iii, c-i, d-iv
(4) a-i, b-ii, c-iv, d-iii

65. ಈ ಕೆಳಗಿನ ಪಟ್ಟಿ-I ಮತ್ತು ಪಟ್ಟಿ-II ನ್ನು ಹೊಂದಿಸಿ, ಸಂಕೇತಗಳನ್ನು ಬಳಸಿಕೊಂಡು ಸರಿಉತ್ತರವನ್ನು ಆರಿಸಿರಿ.

| ಪಟ್ಟಿ-I (ರಾಷ್ಟ್ರೀಯ ಜಲಮಾರ್ಗ) | ಪಟ್ಟಿ-II (ಸಾಗುವ ಪ್ರದೇಶ) |
|---|---|
| a. ರಾಷ್ಟ್ರೀಯ ಜಲಮಾರ್ಗ-1 | i. ಅಲಹಾಬಾದ್ – ಹಲ್ದಿಯಾ |
| b. ರಾಷ್ಟ್ರೀಯ ಜಲಮಾರ್ಗ-2 | ii. ಕಾಕಿನಾಡ – ಪಾಂಡಿಚೇರಿ |
| c. ರಾಷ್ಟ್ರೀಯ ಜಲಮಾರ್ಗ-3 | iii. ಕೊಟ್ಟಾಪುರಂ – ಕೊಲ್ಲಂ |
| d. ರಾಷ್ಟ್ರೀಯ ಜಲಮಾರ್ಗ-4 | iv. ಸಾದಿಯಾ – ಧುಬ್ರಿ ವಿಸ್ತರಣೆ |

(1) a-iv, b-iii, c-i, d-ii
(2) a-i, b-ii, c-iv, d-iii
(3) a-i, b-iv, c-iii, d-ii
(4) a-iv, b-iii, c-ii, d-i

66. ಭೂಕಂಪಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಯಾವುದು ಸರಿಯಲ್ಲ ?

(1) ಶಕ್ತಿಯ ಸಂಚಯದಿಂದಾಗಿ, ಹಲವು ವರ್ಷಗಳ ಕಾಲಾವಧಿಯಲ್ಲಿ ಶಿಲಾಪದರ ನಿಧಾನವಾಗಿ ಬಾಗುತ್ತದೆ.
(2) ಪರಿವರ್ತನಾ ಫಲಕ ಗಡಿಗಳಲ್ಲಿ ಭೂಕಂಪಗಳು ಸಂಭವಿಸುವುದೇ ಇಲ್ಲ.
(3) ಭೂಕಂಪನದ ಅಲೆಗಳು ಎಲ್ಲಾ ದಿಕ್ಕುಗಳಲ್ಲಿ ಹೊರಮುಖವಾಗಿ ಸಂಚರಿಸಿ ಕ್ರಮೇಣ ಶಕ್ತಿಯನ್ನು ಕಳೆದುಕೊಳ್ಳುತ್ತದೆ.
(4) ಭ್ರಂಶ ರೇಖೆಗಳ ಉದ್ದಕ್ಕೂ ಉಂಟಾಗುವ ಹಠಾತ್ ಚಲನೆಯಿಂದ ಭೂಕಂಪಗಳು ಉಂಟಾಗುತ್ತವೆ.

67. 'ಸ್ಥಳೀಯವಾದುದು ಸಾರ್ವತ್ರಿಕವಾಗುತ್ತದೆ' ಈ ಘೋಷ ವಾಕ್ಯ ಯಾವುದಕ್ಕೆ ಸಂಬಂಧಿಸಿದೆ ?

(1) ಕೊಯ್ಲಿನ ಕಾಲ
(2) ಆಹಾರ ಅಭ್ಯಾಸಗಳು
(3) ಬುಡಕಟ್ಟು ಸಂಸ್ಕೃತಿ
(4) ಪ್ರವಾಸೋದ್ಯಮ

68. ಯಾವ ಖನಿಜವನ್ನು "ಚಾಂಪಿಯನ್ ಆಫ್ ಮೆಟಲ್ಸ್" ಎನ್ನುತ್ತಾರೆ ?

(1) ಅಲ್ಯೂಮಿನಿಯಂ (2) ತಾಮ್ರ (3) ಚಿನ್ನ (4) ಕಬ್ಬಿಣ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



741867
BHIKARAT.COM
Scanned with OKEN Scanner

69. ಕೃಷಿಯ ಋತುಮಾನಗಳು ಮತ್ತು ಬೆಳೆಗಳಿಗೆ ಸಂಬಂಧಿಸಿದಂತೆ ಸರಿಯಾಗಿ ಹೊಂದಾಣಿಕೆ ಆಗುವ ಜೋಡಿಗಳನ್ನು ಗುರುತಿಸಿ.

(a) ಖಾರೀಫ್ – ಹತ್ತಿ

(b) ರಾಬಿ – ಗೋಧಿ

(c) ಜೈದ್ – ತರಕಾರಿಗಳು

(d) ಜೈದ್ – ದ್ವಿದಳ ದಾನ್ಯಗಳು

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (a), (b), (c) ಮತ್ತು (d) (2) (b), (c) ಮತ್ತು (d) (3) (a), (b) ಮತ್ತು (d) (4) (a), (b) ಮತ್ತು (c)

70. ಜಂಬಿಟ್ಟಿಗೆ ಮಣ್ಣು ವ್ಯಾಪಕವಾಗಿ ಈ ಪ್ರದೇಶದಲ್ಲಿ ಲಭ್ಯವಿದೆ

(1) ತುಮಕೂರು ಜಿಲ್ಲೆಯ ಕೆಲವು ಭಾಗಗಳು

(2) ಮೈಸೂರು ಜಿಲ್ಲೆಯ ದಕ್ಷಿಣ ಭಾಗ

(3) ಪಶ್ಚಿಮ ಘಟ್ಟ ಪ್ರದೇಶ

(4) ಕರ್ನಾಟಕದ ಆಗ್ನೇಯ ಭಾಗ

71. ಇಟಗಿ ಸುಣ್ಣದ ಕಲ್ಲಿನ ಗಣಿ ಈ ಜಿಲ್ಲೆಯಲ್ಲಿ ಕಂಡುಬರುತ್ತದೆ

(1) ಕಲಬುರಗಿ (2) ಮೈಸೂರು (3) ಚಿತ್ರದುರ್ಗ (4) ಬಳ್ಳಾರಿ

72. ಕರ್ನಾಟಕದಲ್ಲಿನ ಉಕ್ಕಿನ ಸ್ಥಾವರಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಯಾವ ಜೋಡಿ ಸರಿಯಾಗಿದೆ ?

(1) ಸ್ಟೀಲ್ ಆ್ಯಂಡ್ ಎನ್ಎಂಡಿಸಿ – ಚಿಕ್ಕಮಗಳೂರು

(2) ಕುದುರೆಮುಖ ಐರನ್ ಆ್ಯಂಡ್ ಸ್ಟೀಲ್ ಕಂಪೆನಿ – ಬಳ್ಳಾರಿ

(3) ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್ – ಕೊಪ್ಪಳ

(4) ಮೈಸೂರು ಐರನ್ ಆ್ಯಂಡ್ ಸ್ಟೀಲ್ ಲಿಮಿಟೆಡ್ – ಭದ್ರಾವತಿ

73. ಸರಿಯಾದ ಹೇಳಿಕೆಯನ್ನು ಆರಿಸಿ.

(a) ತಂಬಾಕು ಬೆಳೆಯುವ ಸಂಸ್ಕೃತಿಯು ಗುಜರಾತಿನಿಂದ ಪ್ರಾರಂಭಗೊಂಡಿತು.

(b) ಬೀಡಿ ತಂಬಾಕನ್ನು ಅತೀಹೆಚ್ಚು ಉತ್ಪಾದಿಸುವ ರಾಜ್ಯ ಗುಜರಾತ್.

(c) ತಂಬಾಕಿನ ಕೇಂದ್ರ ಸಂಶೋಧನಾಲಯವು ರಾಜಮಂಡ್ರಿಯಲ್ಲಿದೆ.

(d) ಕರ್ನಿಂಗ್ – ಈ ಪದವು ತಂಬಾಕಿಗೆ ಸಂಬಂಧಿಸಿದೆ.

ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) (a), (b), (c) ಮತ್ತು (d) ಸರಿಯಾಗಿವೆ.

(2) (a), (b) ಮತ್ತು (c) ಮಾತ್ರ ಸರಿಯಾಗಿವೆ.

(3) (c) ಮತ್ತು (d) ಮಾತ್ರ ಸರಿಯಾಗಿವೆ.

(4) (a) ಮತ್ತು (b) ಮಾತ್ರ ಸರಿಯಾಗಿವೆ.

74. ಹಲವಾರು ಅಧ್ಯಯನಗಳ ಪ್ರಕಾರ, ಅರಾವಳಿಯಲ್ಲಿ ಗುರುತಿಸಲ್ಪಟ್ಟ 12 ಅಂತರಗಳ ಮೂಲಕ ಮರುಭೂಮಿಯ ಮರಳು ಈಶಾನ್ಯದ ಬಯಲಿನ ಕಡೆಗೆ ಸರಿಯುತ್ತಿದೆ. ಇವು ಹಬ್ಬಿರುವುದು

(1) ಶೋಜಾದಿಂದ ಚೋಪ್ಟಾವರೆಗೆ

(2) ಕೊಲ್ಲಿಯಿಂದ ಮೇಘಮಲೈವರೆಗೆ

(3) ತವಾಂಗ್‌ದಿಂದ ಮುನ್ನಿಯಾರಿವರೆಗೆ

(4) ಮಗ್ರಾದಿಂದ ಖೇತ್ರಿ ಮಾದೋಗಡ್‌ವರೆಗೆ

75. ಎಲ್-ನಿನೋ ವಿದ್ಯಮಾನವು ನೈರುತ್ಯ ಮಾನ್ಸೂನ್ ಮತ್ತು ಭಾರತದ ಹವಾಮಾನ ಪರಿಸ್ಥಿತಿಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ?

(1) ಉತ್ತರ ಭಾರತದಲ್ಲಿ ಚಳಿಗಾಲದ ಮಳೆಯನ್ನು ಹೆಚ್ಚಿಸುತ್ತದೆ.

(2) ಮುಂಗಾರು ಮಳೆಯನ್ನು ದುರ್ಬಲಗೊಳಿಸುತ್ತದೆ. ಮಳೆಯ ಕೊರತೆ ಮತ್ತು ಬರಗಾಲಗಳಿಗೆ ಕಾರಣವಾಗುತ್ತದೆ.

(3) ಭಾರತದ ಹವಾಮಾನ ವ್ಯವಸ್ಥೆಗಳ ಮೇಲೆ ಮಾಪನ ಮಾಡಬಹುದಾದ ಯಾವುದೇ ಪರಿಣಾಮ ಬೀರುವುದಿಲ್ಲ.

(4) ಮುಂಗಾರು ಮಾರುತಗಳನ್ನು ಬಲಪಡಿಸುತ್ತದೆ. ಇದರಿಂದ ವ್ಯಾಪಕ ಪ್ರವಾಹಗಳಿಗೆ ಕಾರಣವಾಗುತ್ತದೆ.

ಕಚ್ಚಾ ಕಾರ್ಯಕ್ಕಾಗಿ ಸ್ಥಳ

SHIKARAHI.COM



Scanned with OKEN Scanner

76. ಭಾರತದ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ತತ್ವಗಳನ್ನು ಪರಿಗಣಿಸಿ.

(a) ನಾಗರಿಕರ ಭಾಗವಹಿಸುವಿಕೆ
(b) ಕಾನೂನಿನ ಪ್ರಭುತ್ವ
(c) ನಿಯಂತ್ರಿತ ನ್ಯಾಯಾಂಗ
(d) ಬಹುಪಕ್ಷ ಪದ್ಧತಿ

ಮೇಲಿನವುಗಳಲ್ಲಿ ಯಾವುದು/ವು ತಪ್ಪಾಗಿದೆ/ವೆ ?

(1) (b) ಮಾತ್ರ (2) (c) ಮಾತ್ರ (3) (a) ಮಾತ್ರ (4) (a) ಮತ್ತು (b)

77. ಯಾವ ದಿನಾಂಕದಂದು 371(J) ಅನುಚ್ಛೇದ ಜಾರಿಗೆ ಬಂದಿತು ?

(1) 4-1-2013 (2) 3-1-2013 (3) 6-1-2013 (4) 2-1-2013

78. ಭಾರತದ ಸಂವಿಧಾನದ ಯಾವ ತಿದ್ದುಪಡಿಯ ಪ್ರಕಾರ "ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ" ಸ್ಥಾಪನೆಯಾಯಿತು ?

(1) ಸಂವಿಧಾನದ 88 ನೇ ತಿದ್ದುಪಡಿ
(2) ಸಂವಿಧಾನದ 91 ನೇ ತಿದ್ದುಪಡಿ
(3) ಸಂವಿಧಾನದ 90 ನೇ ತಿದ್ದುಪಡಿ
(4) ಸಂವಿಧಾನದ 89 ನೇ ತಿದ್ದುಪಡಿ

79. ಈ ಕೆಳಕಂಡ ಯಾವ ಸಾಂವಿಧಾನಿಕ ಹುದ್ದೆಯು ರಾಷ್ಟ್ರಪತಿಯವರಿಂದ ನೇಮಕವಾಗುತ್ತದೆ. ಆದರೆ ರಾಷ್ಟ್ರಪತಿಯವರ ಇಚ್ಛೆಯ ಮೇರೆಗೆ ಅಧಿಕಾರದಲ್ಲಿ ಮುಂದುವರೆಯುವುದಿಲ್ಲ ?

(1) ಅಡ್ವೊಕೇಟ್ ಜನರಲ್
(2) ರಾಜ್ಯಪಾಲರು
(3) ಭಾರತದ ಅಟಾರ್ನಿ ಜನರಲ್ (AGI)
(4) ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು (CAG)

80. ಭಾರತದ ಪ್ರಥಮ ಸಾಲಿಸಿಟರ್ ಜನರಲ್ ಯಾರು ?

(1) ಕೆ. ಪರಾಸರನ್ (2) ಎ.ಡಿ. ಗಿರಿ (3) ಎಚ್.ಎಸ್. ಸನ್ಯಾಲ್ (4) ಸಿ.ಕೆ. ದಫ್ತಾರಿ

81. ಈ ಕೆಳಕಂಡ ಯಾವ ಹುದ್ದೆಯನ್ನು "ಲಾಭದಾಯಕ ಹುದ್ದೆ"ಯ ವ್ಯಾಪ್ತಿಯಿಂದ ಹೊರಗಿಡಲಾಗಿರುವುದಿಲ್ಲ ?

(1) ಕೇಂದ್ರ ಅಥವಾ ಯಾವುದೇ ರಾಜ್ಯದ ಮಂತ್ರಿ
(2) ಯಾವುದೇ ರಾಜ್ಯದ ರಾಜ್ಯಪಾಲರು
(3) ಸಂಸತ್ತಿನ ಸದಸ್ಯ
(4) ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ

82. ಕರ್ನಾಟಕದ ಯಾವ ನದಿಯನ್ನು ಬಾರಂಗಿ ಹೊಳೆ ಎಂದು ಕರೆಯುವರು ?

(1) ಶರಾವತಿ (2) ತುಂಗಭದ್ರಾ (3) ಹಾರಂಗಿ (4) ನೇತ್ರಾವತಿ

83. ಸಮುದಾಯ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಯ ಕಾರ್ಯಾಚರಣೆಯನ್ನು ಪರಿಶೀಲಿಸಲು 1957 ರಲ್ಲಿ ಭಾರತ ಸರ್ಕಾರದಿಂದ ನೇಮಿಸಲ್ಪಟ್ಟ ಸಮಿತಿ ಯಾವುದು ?

(1) ಅಶೋಕ್ ಮೆಹ್ತಾ ಸಮಿತಿ
(2) ಬಲವಂತರಾಯ್ ಮೆಹ್ತಾ ಸಮಿತಿ
(3) ಥುಂಗೋನ್ ಸಮಿತಿ
(4) ಗಾಡ್ಗೀಳ್ ಸಮಿತಿ

84. VVPAT - ವಿಸ್ತರಿಸಿ.

(1) ವೋಟರ್ ವೆರಿಫೈಡ್ ಪೇಪರ್ ಆಡಿಟ್ ಟ್ರಾನ್ಸ್‌ಪರೆನ್ಸಿ
(2) ವೋಟರ್ ವೆರಿಫೈಡ್ ಪೇಪರ್ ಆಡಿಟ್ ಟೀಮ್
(3) ವೋಟರ್ ವೆರಿಫೈಡ್ ಪೇಪರ್ ಆಡಿಟ್ ಟ್ರಯಲ್
(4) ವೋಟರ್ ವೆರಿಫೈಡ್ ಪೇಪರ್ ಆಡಿಟ್ ಟ್ರೈನಿಂಗ್

ಕಚ್ಚಾ ಕಾರ್ಯಕ್ಕಾಗಿ ಸ್ಥಳ

SHIKARAT.COM



Scanned with OKEN Scanner

85. ಈ ಕೆಳಗಿನವುಗಳಲ್ಲಿ ಯಾವುದು ಸಂವಿಧಾನೇತರ ಸಂಸ್ಥೆ ?

(1) ಹಣಕಾಸು ಆಯೋಗ
(2) ಜಂಟಿ ರಾಜ್ಯ ಲೋಕ ಸೇವಾ ಆಯೋಗ
(3) ರಾಜ್ಯ ಲೋಕ ಸೇವಾ ಆಯೋಗ
(4) ಕೇಂದ್ರ ಲೋಕ ಸೇವಾ ಆಯೋಗ

86. ಈ ಕೆಳಗಿನ ಯಾವ ಹೇಳಿಕೆಗಳು ಸಂಯುಕ್ತ ಸರ್ಕಾರದ ಲಕ್ಷಣಗಳಿಗೆ ಸಂಬಂಧಿಸಿದಂತೆ ಸರಿಯಾಗಿವೆ ?

(a) ಲಿಖಿತ ಸಂವಿಧಾನ
(b) ಅಧಿಕಾರಗಳ ವಿಭಜನೆ
(c) ಸ್ವತಂತ್ರ ನ್ಯಾಯಾಂಗ
(d) ಸಾಮೂಹಿಕ ಜವಾಬ್ದಾರಿ

(1) (b) ಮತ್ತು (c) ಸರಿಯಾಗಿವೆ
(2) (a) ಮತ್ತು (b) ಸರಿಯಾಗಿವೆ
(3) (b), (c) ಮತ್ತು (d) ಸರಿಯಾಗಿವೆ
(4) (a), (b) ಮತ್ತು (c) ಸರಿಯಾಗಿವೆ

87. ಸಂವಿಧಾನ ತಿದ್ದುಪಡಿ ವಿಷಯಗಳ ವಿವಾದಗಳ ಕುರಿತು ನಿರ್ಧರಿಸುವ ಸುಪ್ರೀಂ ಕೋರ್ಟಿನ ಅಧಿಕಾರ ಅದರ ಯಾವ ವ್ಯಾಪ್ತಿಯಲ್ಲಿ ಬರುತ್ತದೆ ?

(1) ರಿಟ್ ಅಧಿಕಾರವ್ಯಾಪ್ತಿ
(2) ಸಲಹಾ ಅಧಿಕಾರವ್ಯಾಪ್ತಿ
(3) ಮೇಲ್ಮನವಿ ಅಧಿಕಾರವ್ಯಾಪ್ತಿ
(4) ಮೂಲ ಅಧಿಕಾರವ್ಯಾಪ್ತಿ

88. ಅಭಿಜಿತ್, ಅನುಜ್ ಮತ್ತು ಅರವಿಂದ್ ತಮ್ಮ ವ್ಯವಹಾರದಲ್ಲಿ ಹೂಡಿಕೆ ಮಾಡಿರುತ್ತಾರೆ. ಅಭಿಜಿತ್ 4 ತಿಂಗಳಿಗೆ ರೂ. 10,000 ಗಳನ್ನು, ಅನುಜ್ 6 ತಿಂಗಳಿಗೆ ರೂ. 12,000 ಗಳನ್ನು ಮತ್ತು ಅರವಿಂದ್ 10 ತಿಂಗಳಿಗೆ ರೂ. 8,000 ಗಳನ್ನು ಹೂಡಿಕೆ ಮಾಡಿರುತ್ತಾರೆ. ಸಂಸ್ಥೆ ಗಳಿಸಿದ ಲಾಭದ ಮೊತ್ತವಾದ ರೂ. 1,920 ರಲ್ಲಿ ಅಭಿಜಿತ್‌ನ ಲಾಭದ ಪಾಲು ರೂಪಾಯಿಗಳಲ್ಲಿ ಎಷ್ಟು ?

(1) 400
(2) 350
(3) 200
(4) 600

89. ಒಂದು ಸಂಖ್ಯೆಯ 35%, 70 ಆಗಿದ್ದರೆ, ಆ ಸಂಖ್ಯೆಯನ್ನು ಗುರುತಿಸಿ.

(1) 200
(2) 100
(3) 70
(4) 35

90. ಕೆಳಗೆ ನೀಡಿರುವ ರೇಖಾಚಿತ್ರದಲ್ಲಿ, ಗುಂಪಿಗೆ ಸೇರದ ರೇಖಾಚಿತ್ರವನ್ನು ಗುರುತಿಸಿರಿ.




(1) D
(2) C
(3) B
(4) A

91. ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಕಾರ್ಯಕಲಾಪಗಳು ಇಂಗ್ಲೀಷ್ ಭಾಷೆಯಲ್ಲಿ ನಡೆಸಬೇಕೆಂದು ಸಂವಿಧಾನದ ಯಾವ ವಿಧಿ ತಿಳಿಸುತ್ತದೆ ?

(1) 348 ನೇ ವಿಧಿ
(2) 329 ನೇ ವಿಧಿ
(3) 315 ನೇ ವಿಧಿ
(4) 345 ನೇ ವಿಧಿ

92. ಭಾರತದ ಸಂವಿಧಾನದ ಎಷ್ಟನೇ ವಿಧಿಯ ಪ್ರಕಾರ ಭಾರತದ ಪೌರರಿಗೆ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ನೀಡಲಾಗಿದೆ ?

(1) 330 ನೇ ವಿಧಿ
(2) 326 ನೇ ವಿಧಿ
(3) 325 ನೇ ವಿಧಿ
(4) 324 ನೇ ವಿಧಿ

93. ಭಾರತೀಯ ದಂಡ ಸಂಹಿತೆ (ಐಪಿಸಿ) ಸೆಕ್ಷನ್ 153 A ಇದಕ್ಕೆ ಸಂಬಂಧಿಸಿದೆ.

(1) ಭ್ರಷ್ಟಾಚಾರ
(2) ಪ್ರಾದೇಶಿಕವಾದ
(3) ಮಾನವ ಹಕ್ಕುಗಳು
(4) ಕೋಮು ಹಿಂಸಾಚಾರ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

94. A ಯು B ಗಿಂತ ಮೂರು ಪಟ್ಟು ಹೆಚ್ಚು ಉತ್ತಮ ಕೆಲಸಗಾರ. ಇಬ್ಬರೂ ಸೇರಿ ಒಂದು ಕೆಲಸವನ್ನು 24 ದಿನಗಳಲ್ಲಿ ಮುಗಿಸುತ್ತಾರೆ. ಆ ಕೆಲಸವನ್ನು A ಮಾತ್ರ ನಿರ್ವಹಿಸಿದರೆ ಎಷ್ಟು ದಿನಗಳಲ್ಲಿ ಮುಗಿಸಬಹುದು ?

(1) 32 ದಿನಗಳು (2) 34 ದಿನಗಳು (3) 36 ದಿನಗಳು (4) 96 ದಿನಗಳು

95. 13 ಶರ್ಟ್‌ಗಳು ಮತ್ತು 5 ಪ್ಯಾಂಟುಗಳ ಒಟ್ಟು ಬೆಲೆ ₹ 8,280 ಆಗಿದೆ. ಒಂದು ಪ್ಯಾಂಟಿನ ಸರಾಸರಿ ಬೆಲೆ ₹ 1,227. ಹಾಗಾದರೆ, ಒಂದು ಶರ್ಟಿನ ಸರಾಸರಿ ಬೆಲೆ ಎಷ್ಟು ?

(1) ₹ 195 (2) ₹ 175 (3) ₹ 165 (4) ₹ 2,145

96. ರಮೇಶ ಆತನ ತಂದೆಗಿಂತ 27 ವರ್ಷ ಸಣ್ಣವನು. 6 ವರ್ಷಗಳ ಹಿಂದೆ ಆತನ ತಂದೆ ಅವನಿಗಿಂತ 4 ಪಟ್ಟು ಹೆಚ್ಚು ದೊಡ್ಡವರಾಗಿದ್ದರು. ಈಗ ಆತನ ತಂದೆಯ ವಯಸ್ಸನ್ನು ಗುರುತಿಸಿ.

(1) 45 (2) 42 (3) 40 (4) 35

97. 'A' ಕೊಳವೆಯು ಒಂದು ಟ್ಯಾಂಕನ್ನು 20 ಗಂಟೆಗಳಲ್ಲಿ ಮತ್ತು 'B' ಕೊಳವೆಯು 30 ಗಂಟೆಗಳಲ್ಲಿ ತುಂಬಬಲ್ಲದು. ಖಾಲಿ ಟ್ಯಾಂಕಿಗೆ ಎರಡೂ ಕೊಳವೆಗಳಿಂದ ನೀರು ತುಂಬಿಸಿದರೆ, ಟ್ಯಾಂಕ್ ತುಂಬಲು ಎಷ್ಟು ಸಮಯ ಹಿಡಿಯುತ್ತದೆ ?

(1) 12 ಗಂಟೆಗಳು (2) 10 ಗಂಟೆಗಳು (3) 15 ಗಂಟೆಗಳು (4) 8 ಗಂಟೆಗಳು

98. ಒಂದು ಕಾಲೇಜಿನಲ್ಲಿ ಬೇರೆ ಬೇರೆ ವಿಷಯಗಳ 60 ಜನ ಉಪನ್ಯಾಸಕರಿದ್ದಾರೆ. ಅವರ ಶೇಕಡಾವಾರು ಸಂಖ್ಯೆಯನ್ನು ಕೆಳಗಿನ ಪೈ ನಕ್ಷೆಯಲ್ಲಿ ಸೂಚಿಸಿದೆ. ಇದರಲ್ಲಿ ಗಣಿತ ಮತ್ತು ಭೌತಶಾಸ್ತ್ರ ಉಪನ್ಯಾಸಕರುಗಳ ಸಂಖ್ಯೆಗಳ ನಡುವಿನ ವ್ಯತ್ಯಾಸ




(1) 10 (2) 6 (3) 15 (4) 25

99. ನಿರ್ದೇಶನಗಳು :

R → T ಅಂದರೆ R, T ಯ ತಂದೆ, S × Y ಅಂದರೆ S, Y ಯ ಹೆಂಡತಿ, P + Q ಅಂದರೆ P, Q ನ ಸಹೋದರ.

D + A × B → E, ಹಾಗಾದರೆ, D, E ಗೆ ಯಾವ ರೀತಿಯಲ್ಲಿ ಸಂಬಂಧಿಸಿದೆ ?

(1) ತಂದೆ (2) ಮಾವ (3) ಆಂಟಿ (4) ಅಂಕಲ್

100. U4P15B7 ಇದರ ನೀರಿನ ಪ್ರತಿಬಿಂಬವು

(1) ՈㄣԳꟾꙄBㄱ (2) ՈㄣЬꟾꙄBᒧ (3) ՈㄣdꟾꙄBᒧ (4) ՈㄣЬꟾꙄBᒧ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner